UASB
LIBRARY
Newspaper Clippings
Pg .1 Thursday 08-07-2021 Jai Kisan



ಕೃಷಿ ವಿವಿಯಿಂದ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರೈತ ಹಾಗೂ ರೈತ ಮಹಿಳೆಯರಿಗಾಗಿ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಶಸ್ತಿಗೆ ಅರ್ಜಿಯನ್ನು ಆಹ್ವಾನಿಸಿದೆ.

ಮುಂಬರುವ ಅಕ್ಟೋಬರ್‌ನಲ್ಲಿ ನಡೆಯಲಿರುವ ಕೃಷಿಮೇಳ-2021ರ ಸಂದರ್ಭದಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ನಿಗದಿತ ಅರ್ಜಿ ನಮೂನೆಯು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರವರ ಕಛೇರಿ, ವಿಸ್ತರಣಾ ನಿರ್ದೇಶಕರ ಕಛೇರಿ, ಜಿಕೆವಿಕೆ ಕಚೇರಿ, ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಘಟಕ ದಲ್ಲಿ ದೊರೆಯುತ್ತದೆ.

ಅರ್ಜಿ ನಮೂನೆಯು ವಿವಿ ವೆಬ್‌ಸೈಟ್‌ನಲ್ಲೂ ಲಭ್ಯವಿರುತ್ತದೆ. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಜು.31 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ವಿಸ್ತರಣಾ ನಿರ್ದೇಶಕರ ಕಚೇರಿ, ಕೃಷಿ ವಿವಿ, ಜಿಕೆವಿಕೆ, ಬೆಂಗಳೂರು-560065 ದೂ: 080-23330153 ಸಂಪರ್ಕಿಸಬಹುದು ಎಂದು ವಿವಿಯ ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

08-07-2021
Hd Pg 03

UASB LIBRARY
Newspaper Clippings
Pg .2 Jai Kisan Thursday 08-07-2021

ಮೈಸೂರು ಮತ್ತು ಚಾಮರಾಜನಗರದಲ್ಲಿ ಕಾರ್ಯಾರಂಭ | ಎಲ್ಲೆಡೆ ಸಾವಯವ ಕೃಷಿಗೆ ಉತ್ತೇಜನ | ರೈತ ಸಂಪರ್ಕ ಕೇಂದ್ರಗಳಲ್ಲಿ ಹಸಿರೆಲೆ ಬೀಜ ವಿತರಣೆ

ಭೂ ಸಾರ ಹೆಚ್ಚಳಕ್ಕೆ ಹಸಿರೆಲೆ ಗೊಬ್ಬರ

■ ಎಸ್.ಕೆ.ಚಂದ್ರಶೇಖರ್ ಮೈಸೂರು
chandrashekar.sk@timesgroup.com

ರಾಸಾಯನಿಕ ಗೊಬ್ಬರ, ಔಷಧ ಬಳಕೆ ಹಾಗೂ ನಿರಂತರ ಬೇಸಾಯದಿಂದ ಭೂಮಿಯ ಸತ್ವ ಕ್ಷೀಣಿಸಿದ್ದರಿಂದ ಹೆಚ್ಚಿನ ಇಳುವರಿ ಗಗನ ಕುಸುಮವಾಗಿದೆ. ಹಾಗಾಗಿ ಫಲವತ್ತತೆ ಹೆಚ್ಚಿಸಲು ಕೃಷಿ ಇಲಾಖೆ ಮೈಸೂರು ಮತ್ತು ಚಾಮರಾಜನಗರದಲ್ಲಿ 'ಹಸಿರೆಲೆ ಗೊಬ್ಬರ' ಅಭಿಯಾನ ಆರಂಭಿಸಿದೆ. ಇದನ್ನು ರಾಜ್ಯದೆಲ್ಲೆಡೆ ನಡೆಸುವ ಕಾರ್ಯಯೋಜನೆ ಜಾರಿಯಲ್ಲಿದೆ.

ಸೆಣಬು, ಡಯಾಂಚ, ನಸಗುನ್ನಿ, ಅಲಸಂದೆ ಬೆಳೆಗಳನ್ನು ಹಸಿರೆಲೆ ಗೊಬ್ಬರವಾಗಿ ಬೆಳೆಯಲು ಇಲಾಖೆಯಿಂದಲೇ ಬೀಜ ನೀಡುವ ಮೂಲಕ ರೈತರನ್ನು ಉತ್ತೇಜಿಸುತ್ತಿದೆ. ಏಪ್ರಿಲ್ ಕೊನೆ ವಾರದಲ್ಲಿ ಸುರಿದ ಮಳೆಯ ಸಮಯದಲ್ಲಿ ಅಭಿಯಾನ ಆರಂಭಗೊಂಡಿದ್ದು, ಜುಲೈ 31ರವರೆಗೂ ನಡೆಯಲಿದೆ. ಈಗಾಗಲೇ ಎರಡೂ ಜಿಲ್ಲೆಯ ಸುಮಾರು 8 ಸಾವಿರ ಎಕರೆಯಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ನಡೆದಿದ್ದು, ಒಂದು ಹಂತಕ್ಕೆ ಗಿಡಗಳು ಬೆಳೆದು ನಿಂತಿವೆ.

4ರಿಂದ 6 ಟನ್ ಸಾವಯವ ಗೊಬ್ಬರ

ಒಂದು ಎಕರೆಯಲ್ಲಿ ಹಸಿರೆಲೆ ಗೊಬ್ಬರ ಬೆಳೆಯಬೇಕಾದರೆ 10 ರಿಂದ 15 ಕೆ.ಜಿ.ಬಿತ್ತನೆ ಬೀಜ ಅವಶ್ಯವಿದ್ದು, 4 ರಿಂದ 6 ಟನ್ ಗೊಬ್ಬರ ಉತ್ಪತ್ತಿ ಮಾಡಬಹುದಾಗಿದೆ. ಇದಕ್ಕೆ ತಗಲುವ ವೆಚ್ಚ 500 ರಿಂದ 600 ರೂ. ಮಾತ್ರ. ಇಷ್ಟೇ ಜಾಗಕ್ಕೆ ರಸಗೊಬ್ಬರ ಖರೀದಿಸಿದರೆ 4,000 ರೂ. ವೆಚ್ಚವಾಗುತ್ತದೆ. ಇದಕ್ಕೆ ರೈತರು ಸದ್ಯದ ಪರಿಸ್ಥಿತಿಯಲ್ಲಿ ಶಕ್ತರಾಗಿಲ್ಲ. ಹಾಗಾಗಿ ಕಡಿಮೆ ಖರ್ಚಿನಲ್ಲಿ ಸಾವಯವ ಗೊಬ್ಬರ ಬೆಳೆಯುವುದಕ್ಕೆ ಪರ್ಯಾಯ ಮಾರ್ಗ ಎಂದರೆ ಹಸಿರೆಲೆ ಗೊಬ್ಬರವಾಗಿದ್ದು, ಬಿತ್ತನೆ ಮಾಡಿದ 50 ರಿಂದ 60 ದಿನ ಬೆಳೆಸಿ ಮಣ್ಣಿಗೆ ಸೇರಿಸಿದರೆ ಉತ್ತಮ ಗೊಬ್ಬರವಾಗುತ್ತದೆ ಎಂದು ನಾಗನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಯೋಗೇಶ್ ಜಿ.ಎಚ್. ತಿಳಿಸಿದ್ದಾರೆ.



ತೆಂಗು ಬೆಳೆ ನಡುವೆ ಹಸಿರೆಲೆ ಗೊಬ್ಬರವಾಗಿ ಬೆಳೆದಿರುವ ರೈತ.

ಜಮೀನಿಗೆ ರಾಸಾಯನಿಕ ಗೊಬ್ಬರ ಹಾಕುವುದನ್ನು ಕಡಿಮೆ ಮಾಡಿ ಸಾವಯವ ಗೊಬ್ಬರ ಬಳಕೆ ಹೆಚ್ಚಿಸುವುದರಿಂದ ಮಣ್ಣು ಮತ್ತು ಪರಿಸರದ ಸಮತೋಲನವನ್ನು ಕಾಪಾಡಿಕೊಂಡು ಕಡಿಮೆ ಖರ್ಚಿನಲ್ಲಿ ಉತ್ತಮ ಇಳುವರಿ ಪಡೆಯಲು ರೈತರಿಗೆ ಹಸಿರೆಲೆ ಗೊಬ್ಬರ ವರದಾನವಾಗಿದೆ.

-ಯೋಗೀಶ್ ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ನಾಗನಹಳ್ಳಿ

ಎಲ್ಲೆಡೆ ರಸಗೊಬ್ಬರ ಮುಕ್ತಿ ಬೇಕಿದೆ

ಬಿತ್ತನೆ ಸಮಯ ಬಂದಾಗ ರೈತರು ರಸಗೊಬ್ಬರಕ್ಕಾಗಿ ಪರದಾಡುವುದು ಸಾಮಾನ್ಯವಾಗಿದೆ. ಇತ್ತೀಚೆಗೆ ರೈತರು ಅಧಿಕ ಇಳುವರಿಗೆ ಹೆಚ್ಚಿನ ಗೊಬ್ಬರ ಎನ್ನುವ ಸಿದ್ಧಾಂತಕ್ಕೆ ಮೊರೆ ಹೋದ ಪರಿಣಾಮ ರೋಗ ಕೀಟಗಳು ಹೆಚ್ಚಾಗಿ ರೈತರ ಬೇಸಾಯದ ಖರ್ಚು ಅಧಿಕಗೊಂಡಿದೆ. ಜತೆಗೆ ಇಳುವರಿ ಕಡಿಮೆಯಾಗಿ ರೈತರ ಆದಾಯವೂ ಕ್ಷೀಣಿಸಿ ನಷ್ಟ ಅನುಭವಿಸುತ್ತಿದ್ದಾರೆ. ಇದರಿಂದ ಹೊರ ಬರಬೇಕಾದರೆ ಸಾವಯವ ಕೃಷಿಯೆಡೆಗೆ ಮರಳಬೇಕಿದೆ. ಆಸಕ್ತ ರೈತರು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಅಥವಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಿದರೆ ಹಸಿರೆಲೆ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ಪಡೆಯಬಹುದಾಗಿದೆ.

08-07-2021 Vk Pg 07